**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂ.ಯವರ ನ್ಯಾಯಾಲಯ, ಕುಂದಾಪುರ**

**ಸಿ.ಸಿ. ನಂ. 852/2023**

**ಪಿರ್ಯಾದುದಾರರು:** ಪರ್ಸೀನ್ ಬೋಟ್ ಮೀನುಗಾರರ ಸ್ವ ಸಹಾಯ ಸದಸ್ಯ ಸಂಘ (ಗುಂಪು) ಗಂಗೊಳ್ಳಿ

**-ವಿರುದ್ಧ-**

**ಆರೋಪಿ:** ಮೊಹಮ್ಮದ್ ಸಯ್ಯದ್

**ಆಪಾದನೆ**

ಆಪಾದಿತರಾದ ನೀವು ಪಿರ್ಯಾದುದಾರರಿಂದ ಹರಾಜು ಪ್ರಕ್ರಿಯೆಯ ಮೂಲಕ ಮೀನುಗಳನ್ನು ಖರೀದಿಸಿದ ಸಾಲದ ಮರುಪಾವತಿಯ ಬಗ್ಗೆ ನೀವು ಪಿರ್ಯಾದುದಾರರಿಗೆ ರೂಪಾಯಿ 10,29,754/- ಮೊತ್ತದ 27-12-2022 ರ ದಿನಾಂಕದ 658074 ಸಂಖ್ಯೆಯುಳ್ಳ ಕೆನರಾ ಬ್ಯಾಂಕ್, ಗಂಗುಳ್ಳಿ ಶಾಖೆಯ ಚೆಕ್ಕನ್ನು ನೀಡಿದ್ದು, ಸದ್ರಿ ಚೆಕ್ಕನ್ನು ನಗದೀಕರಿಸಲು ಪಿರ್ಯಾದುದಾರರು ಅದೇ ಬ್ಯಾಂಕಿಗೆ ಹಾಜರುಪಡಿಸಿದಾಗ 'ಸಾಕಷ್ಟು ಹಣವಿಲ್ಲ.' ಎಂಬ ಹಿಂಬರಹದೊಂದಿಗೆ ದಿನಾಂಕ 28-12-2022 ರಂದು ಸದ್ರಿ ಚೆಕ್ ವಾಪಸ್ಸು ಬಂದಿದ್ದು, ಆ ನಂತರ ಪಿರ್ಯಾದುದಾರರು ನಿಮಗೆ 17-01-2023 ರಂದು ವಕೀಲರ ಮೂಲಕ ನೋಟಿಸ್ ಕೊಡಿಸಿದ್ದು, ನಂತರವೂ ಸಹ ನೀವು ಸದರಿ ಹಣವನ್ನು ಮರುಪಾವತಿ ಮಾಡದೇ ಇದ್ದುದರಿಂದ ಲಿಖಿತ ಅಧಿನಿಯಮ 138 ರನ್ವಯ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ವಿರುದ್ಧ ಆಪಾದನೆ ಇರುತ್ತದೆ.

ಪ್ರಶ್ನೆ-1: ನೀವು ತಪ್ಪನ್ನು ಒಪ್ಪುವಿರೋ ಅಥವಾ ವಿಚಾರಣೆಯಾಗಬೇಕೆ?
ಉತ್ತರ:

(ಮೇಲ್ಕಂಡ ಆಪಾದನೆಯನ್ನು ಆರೋಪಿತನಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾಗಿದ್ದು ಅವರ ಉತ್ತರವನ್ನು ದೃಢೀಕರಿಸಲಾಗಿದೆ)

ದಿನಾಂಕ: 13-05-2024

2 ನೇ ಹೆಚ್ಚುವರಿ **ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ಕುಂದಾಪುರ.**